1	2	3	4
90)	ಬಿದನೂರ	ಅಫಜಲ್‌ಪುರ	ಗುಲ್ಬರ್ಗಾ
91)	ಪುಟಪಾಕ್	ಯಾದ್‌ಗಿರ್	ಗುಲ್ಬರ್ಗಾ
92)	ಬಾಯಿದೊಡ್ಡಿ	ರಾಯಚೂರು	ರಾಯಚೂರು
93)	ಮಾಚನೂರು	ಮಾನ್ವಿ	ರಾಯಚೂರು
94)	ಹುಣಸಿಹಾಳ್	ಯಲ್ಬುರ್ಗಾ	ಕೊಪ್ಪಳ
95)	ಕೂಡುಬಿದರಹಾಳ್	ಶಿರಗುಪ್ಪ	ಬಳ್ಳಾರಿ
96)	ಉತ್ತಂಗಿ	ಹಡಗಲಿ	ಬಳ್ಳಾರಿ
97)	ವಣ್ಣೀನೂರ	ಬಳ್ಳಾರಿ	ಬಳ್ಳಾರಿ
98)	ಹಿರೇಮಲ್ಲನಕೇರಿ	ಹಡಗಲಿ	ಬಳ್ಳಾರಿ
99)	ಹೆಗ್ಡಾಪುರ	ಔರಾದ್	ಬೀದರ್
100)	ರಾಜೋಳ	ಬಸವಕಲ್ಯಾಣ	ಬೀದರ್

ರಾಜ್ಯದಲ್ಲಿರುವ ಬೀಡಿ ಕಾರ್ಮಿಕರ ಸಮಸ್ಯೆ

224 (276) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು),

ಆ) ವಸತಿ ನೀಡುವ ಯೋಜನೆಯಡಿಯಲ್ಲಿ ಬೀಡಿಕಾರ್ಮಿಕರಿಗೆ ನೀಡಿದ ವಸತಿಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು)

ಇ) ಇನ್ನುಳಿದ ಕಾರ್ಮಿಕರಿಗೆ ವಸತಿ ನೀಡಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕರಾಜ್ಯ ಸಚಿವರು) :

ಅ) ಬೀಡಿ ಮತ್ತು ಸಿಗಾರ್ ಕಾರ್ಮಿಕರ (ಕಂಡಿಷನ್ಸ್ ಆಫ್ ಎಂಪ್ಲಾಯಿಮೆಂಟ್) ಕಾಯಿದೆ 1996ರ ಅಡಿಯಲ್ಲಿ ನೋಂದಾಯಿಸಿದ ಪ್ರಕಾರ ರಾಜ್ಯಾದ್ಯಂತ 2, 92, 380 ಕಾರ್ಮಿಕರಿದ್ದು, ಜಿಲ್ಲಾವಾರು ವಿವರದ ಪಟ್ಟಿಯನ್ನು ಲಗತ್ತಿಸಿದೆ.

ಆ) 1, 560 ಮನೆಗಳನ್ನು ನಿರ್ಮಿಸಿ ಈ ಕೆಳಗಿನಂತೆ ಹಂಚಲಾಗಿದೆ.

1.	ಚಾಮರಾಜನಗರ ಮೈಸೂರು ಜಿಲ್ಲೆ	..	425
2.	ಕ್ಯಾತಮಾರನಹಳ್ಳಿ ಮೈಸೂರು ಜಿಲ್ಲೆ	..	1000
3.	ಸಾಗರ, ಶಿವಮೊಗ್ಗ ಜಿಲ್ಲೆ	..	135
			1560

ಇ) 489 ಮನೆಗಳನ್ನು ಈಗಾಗಲೇ ನಿರ್ಮಿಸಲಾಗಿದ್ದು, ಫಲಾನುಭವಿಗಳಿಗೆ ವಶಕ್ಕೆ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

608 ಮನೆಗಳನ್ನು ನಿರ್ಮಿಸಲು ಮಂಜೂರಾತಿಯನ್ನು ನೀಡಿದ್ದು, ಅದರ ಪೈಕಿ 327 ಮನೆಗಳ ನಿರ್ಮಾಣ ವಿವಿಧ ಹಂತದಲ್ಲಿ ಇದೆ. ಇನ್ನುಳಿದ 281 ಮನೆಗಳನ್ನು ಕಟ್ಟಲು ಕ್ರಮ ತೆಗೆದುಕೊಳ್ಳಲಾಗುವುದು. ಮುಂದುವರಿದ 1958 ಮನೆಗಳನ್ನು ವಿವಿಧ ಸ್ಥಳಗಳಲ್ಲಿ ಕಟ್ಟಿಸಲು ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಅನುಬಂಧ ಪಟ್ಟಿ

ಬೀಡಿ ಕಾರ್ಮಿಕರ ಪಟ್ಟಿ (ಜಿಲ್ಲಾವಾರು)

	ಜಿಲ್ಲೆಯ ಹೆಸರು	ಬೀಡಿ ಕಾರ್ಮಿಕರ ಸಂಖ್ಯೆ
1.	ಬೆಂಗಳೂರು	10,914
2.	ಮೈಸೂರು	6,573
3.	ಬೆಳಗಾಮ್	3,128
4.	ಹಾಸನ	1,208
5.	ಹುಬ್ಬಳ್ಳಿ (ಧಾರವಾರ್)	4,801
6.	ಚಿತ್ರದುರ್ಗ (ದಾವಣಗೆರೆ)	4,479
7.	ಗುಲ್ಬರ್ಗಾ	823
8.	ಮಂಗಳೂರು	2,38,702
9.	ಬಿಜಾಪುರ	783
10.	ಶಿವಮೊಗ್ಗ	1,550
11.	ತುಮಕೂರ್	8,412
12.	ಮಂಡ್ಯ	6,282
13.	ಕೋಲಾರ್	3,081
14.	ಬಳ್ಳಾರಿ	1,406
15.	ರಾಯಚೂರು	168
16.	ಚಿಕ್ಕಮಗಳೂರು	70
	ಒಟ್ಟು	2,92,380

ಬೆಣಗಳೂರು ನಗರ ಹೊರವಲಯಗಳಲ್ಲಿರುವ ಗಾರ್ಮೆಂಟ್ಸ್ ಘಟಕಗಳಲ್ಲಿನ ಕಾರ್ಮಿಕರಿಗೆ ಕನಿಷ್ಠ ಕೂಲಿ

225 (425) ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೆಂಗಳೂರು ನಗರ ಹೊರ ವಲಯಗಳಲ್ಲಿರುವ ಸಿದ್ಧ ಉಡುಪು ಘಟಕ (ಗಾರ್ಮೆಂಟ್ಸ್) ಗಳೆಷ್ಟು?